ಶ್ರೀ ಡಿ. ಮಂಜುನಾಥ್.—ಮಾನ್ಯ ಸದಸ್ಯರು, ಕೇಳಿರತಕ್ಕಂತಹ ಪ್ರಶ್ನೆ ಕಂಟ್ರಾಕ್ಟ್ ಲೇಬರ್ಸ್‌ಗೆ ಮನೆಗಳನ್ನು ಕಟ್ಟಿಸಿ ಕೊಡಲಾಗಂವುದೇಯೆಂದು ಕೇಳಿದ್ದಿರಿ, ಅಂತಹ ಯೋಜನೆ ರಾಜ್ಯ ಸರ್ಕಾರದಲ್ಲಿಲ್ಲ. ಸೈಟುಗಳನ್ನು ಕೊಡಿಸಿದರೆ, ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿ ಕಳುಹಿಸಿಕೊಡಲಾಗುತ್ತದೆ. ಕಾರ್ಮಿಕ ಇಲಾಖೆ ಕಣ್ಣುಮುಚ್ಚಿಕೊಂಡು ಕುಳಿತಿಲ್ಲ. ವಿಚಾರಣೆ ಮಾಡಿ ತೊಂದರೆಯಿರತಕ್ಕ ಕಾರ್ಮಿಕರಿಗೆ ಸೂಕ್ತ ಪರಿಹಾರ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಯು. ಭೂಪತಿ.—ನಾನು ಕೇಳುತ್ತೇನೆ ಸೈಟುಗಳನ್ನು ಕೊಡಿಸಿದರೆ ಎಷ್ಟು ದಿವಸದಲ್ಲಿ ಅದನ್ನು ಕಾರ್ಯರೂಪಕ್ಕೆ ತರಂತ್ತೀರಿ. ?

ಶ್ರೀ ಡಿ. ಮಂಜುನಾಥ್.—ಮೊದಲು ಸೈಟುಗಳನ್ನು ಕೊಡಿಸುವ ವ್ಯವಸ್ಥೆಯಾಗಲಿ. ಆಮೇಲೆ ಕೇಂದ್ರ ಸರ್ಕಾರಕ್ಕೆ ನಾವು ಶಿಫಾರಸ್ಸು ಮಾಡಿ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರ

ರಾಜ್ಯದಲ್ಲಿರುವ ಕಾರ್ಮಿಕ ಕಲ್ಯಾಣ ಕೇಂದ್ರಗಳು

೫೩೫. ಶ್ರೀ ಉಸ್ತಾದ್ ಮಹಿಬೂಬ್ ಪಟೇಲ್ (ಬಿಜಾಪುರ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿರುವ ಕಾರ್ಮಿಕ ಕಲ್ಯಾಣ ಕೇಂದ್ರಗಳ ಸಂಖ್ಯೆ ಎಷ್ಟು ?

(ಆ) ಆ ಪೈಕಿ ಎಷ್ಟು ಕಾರ್ಮಿಕ ಕಲ್ಯಾಣ ಕೇಂದ್ರಗಳು ನಡೆಯುತ್ತಿವೆ ಹಾಗೂ ಎಷ್ಟು ನಡೆಯುತ್ತಿಲ್ಲ, (ಜಿಲ್ಲಾವಾರು ಮಾಹಿತಿಯನ್ನೊದಗಿಸುವುದು)

(ಇ) ಸದರಿ ಕೇಂದ್ರದ ಕಲ್ಯಾಣಾಧಿಕಾರಿಯನ್ನು ಯಾವ ರೀತಿ ನೇಮಿಸಲಾಗುವುದು ಮತ್ತು ಅವರ ಸೇವಾವಧಿ ಎಷ್ಟು ?

(ಈ) ಕಾರ್ಮಿಕ ಕಲ್ಯಾಣ ನೀತಿ ಏನು ಮತ್ತು ಕಾರ್ಮಿಕ ಕಲ್ಯಾಣಕ್ಕೆ ಸಂಬಂಧಿಸಿದ ಹಣ ಯಾವ ರೀತಿ ವಿನಿಯೋಗವಾಗುತ್ತಿದೆ.

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಮಂತ್ರಿಗಳು).—

(ಅ) ಕರ್ನಾಟಕದಲ್ಲಿ ೩೩ ಕಾರ್ಮಿಕ ಕಲ್ಯಾಣ ಕೇಂದ್ರಗಳು ಇದ್ದು ಅವುಗಳಲ್ಲಿ ೨೩ ಕೇಂದ್ರಗಳನ್ನು ಕಾರ್ಮಿಕ ಇಲಾಖೆಯು ಹಾಗೂ ೧೦ ಕೇಂದ್ರಗಳನ್ನು ಕಾರ್ಮಿಕ ಕಲ್ಯಾಣ ಮಂಡಳಿಯು ನಡೆಸುತ್ತಿದೆ.

(ಆ) ಕಾರ್ಮಿಕ ಇಲಾಖೆಯು ನಡೆಸುವ ೨೧ ಕೇಂದ್ರಗಳು ಹಾಗೂ ಕಾರ್ಮಿಕ ಕಲ್ಯಾಣ ಮಂಡಳಿ ನಡೆಸುವ ೧೦ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

೨ ಕಲ್ಯಾಣ ಕೇಂದ್ರಗಳಾದ (೧) ಕಾಟನ್‌ಪೇಟೆ ಮತ್ತು ಚಾಮರಾಜಪೇಟೆ ಬೆಂಗಳೂರು ನಡೆಯುತ್ತಿಲ್ಲ.

(ಇ) ಕಾರ್ಮಿಕ ಇಲಾಖೆ ನಡೆಸುತ್ತಿರುವ ಕಲ್ಯಾಣ ಕೇಂದ್ರಗಳನ್ನು ಕಾರ್ಮಿಕ ಆಧಿಕಾರಿಗಳು ನೋಡಿಕೊಳ್ಳುತ್ತಿದ್ದು ಇವರ ಸೇವಾ ನಿಯಮಗಳು ಕೆಸಿಎಸ್‌ಆರ್‌ನಿಂದ ನಿಯಂತ್ರಿಸಲ್ಪಡುತ್ತವೆ. ಕಾರ್ಮಿಕ ಕಲ್ಯಾಣ ಮಂಡಳಿ ನಡೆಸುತ್ತಿರುವ ಕೇಂದ್ರಗಳ ಸಿಬ್ಬಂದಿಯನ್ನು ಕಾರ್ಮಿಕ ಕಲ್ಯಾಣ ಆಯುಕ್ತರು ನಿರ್ದೇಶಿಸಿರುತ್ತಾರೆ. ಹಾಗೂ ಆಯ್ಯೆಯು ಮಂಡಳಿಯ ಒಪ್ಪಿಗೆಯನ್ನು ಪಡೆದಿರುತ್ತದೆ ಮತ್ತು ವೀಸಲಾತಿ ಕಾಯ್ದಿರಿಸುವಿಕೆ ನಿಯಮದಂತೆ ಮಾಡಲ್ಪಟ್ಟಿವೆ. ಈ ಸಿಬ್ಬಂದಿಯು ಸಹ ಕೆಸಿಎಸ್‌ಆರ್‌ನಿಂದ ನಿಯಂತ್ರಿಸಲ್ಪಡುತ್ತದೆ.

(ಈ) ಕಾರ್ಮಿಕರು ಹಾಗೂ ಅವರ ಸಂಬಂಧಿಗಳಿಗೆ ಮನರಂಜನೆ ಹಾಗೂ ತರಬೇತಿ ಕೊಡುವ ಸಲುವಾಗಿ ಕಲ್ಯಾಣ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಕಲ್ಯಾಣ ನಿಧಿಯು ಈ ಕೇಂದ್ರಗಳನ್ನು ನಡೆಸಲು ಮತ್ತು ವಿದ್ಯಾರ್ಥಿವೇತನ ವೈದ್ಯಕೀಯ ಸೌಲಭ್ಯ ಹಾಗೂ ಮಂಡಳಿಯ ಒಪ್ಪಿಗೆ ಪಡೆದ ಮತ್ತಿತರ ಕಾರ್ಯಕ್ರಮಗಳನ್ನು ನಡೆಸಲು ವಿನಿಯೋಗವಾಗುತ್ತಿದೆ.

ಚುಕ್ಕೆ ಗುರುತಿಲ್ಲದ ಪಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರಿ ಮಂತ್ರಿಯವರು).—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ಪಟ್ಟಿಯನ್ನು ಸಭೆಯ ಮುಂದಿಡಲಾಗಿದೆ.

ರಾಜ್ಯದಲ್ಲಿ ಮುಚ್ಚಿರುವ ಹತ್ತಿ ಗಿರಣಿಗಳು

೧೯. ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಮುಚ್ಚಲ್ಪಟ್ಟಿರುವ ಹತ್ತಿ ಗಿರಣಿಗಳ ಸಂಖ್ಯೆ ಎಷ್ಟು ಮತ್ತು ಎಷ್ಟು ಕಾಲಾವಧಿಯಿಂದ ಮುಚ್ಚಲ್ಪಟ್ಟಿದೆ ? ಹಾಗೂ ಇದರಿಂದ ಉದ್ಯೋಗ ಕಳೆದುಕೊಂಡಿರುವ ನೌಕರರ ಸಂಖ್ಯೆ ಎಷ್ಟು ?

(ಆ) ಈ ಗಿರಣಿಗಳನ್ನು ಪುನಃ ಪ್ರಾರಂಭಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಮಂತ್ರಿತಳುಃ.—

(ಅ) ನಾಲ್ಕು ರಾಜ್ಯದಲ್ಲಿ ಯಾವ ಹತ್ತಿ ಗಿರಣಿಗಳೂ ಪೂರ್ಣವಾಗಿ ಮುಚ್ಚಿರುವುದಿಲ್ಲ. ಕೆಲವು ಬೀಗ ಮುದ್ರೆ ಕಾರಣ ಅಥವಾ ಲೇ ಆಫ್ ಕಾರಣ ಅಥವಾ ಮುಷ್ಕರದ ಕಾರಣ ಕೆಲಸ ಮಾಡುತ್ತಿಲ್ಲ. ಆದುದರಿಂದ ಅಲ್ಲಿನ ಕೆಲಸಗಾರರು ಕೆಲಸ ಕಳೆದುಕೊಂಡಿದ್ದಾರೆಂದು ಹೇಳುವಂತಿಲ್ಲ.

(ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದ ಡಚ್ ಮಾದರಿಯ ನೇಕಾರಿಕಾ ವಸತಿ ಹಾಗೂ ಕಾರ್ಯಾಗಾರಗಳ ಬಗ್ಗೆ

೭೦. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).— ಮಾನ್ಯ ಸಣ್ಣ ಪ್ರಮಾಣದ ರಾಜ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿ ಡಚ್ ಮಾದರಿಯ ನೇಕಾರಿಕಾ ವಸತಿ ಹಾಗೂ ಕಾರ್ಯಾಗಾರಗಳು ಎಷ್ಟು ಇರುವುವು (ಜಿಲ್ಲಾವಾರು ಮಾಹಿತಿಯನ್ನೊದಗಿಸುವುದು).

(ಆ) ರೋಣ ತಾಲ್ಲೂಕ್ ಗಜೇಂದ್ರಗಡ ಬಹುಜನ ನೇಕಾರರ ನಗರವೆನ್ನುವುದು ಸರಕಾರದ ಗಮನಕ್ಕೆ ಬಂದಿದೆಯೆ,

(ಇ) ಹಾಗಿದ್ದಲ್ಲಿ, ಡಚ್ ಮಾದರಿಯ ನೇಕಾರಿಕಾ ವಸತಿ ಹಾಗೂ ಕಾರ್ಯಾಗಾರ ಸ್ಥಾಪಿಸುವಲ್ಲಿ ಯಾವ ಕ್ರಮ ಕೈಕೊಳ್ಳಲಾಗಿದೆ.

(ಈ) ಹಾಗಿಲ್ಲದಿದ್ದಲ್ಲಿ ಬೇಡಿಕೆಯ ತೀಪ್ರತೆಯನ್ನು ಅರಿತುಕೊಂಡು, ಡಚ ಮಾದರಿಯ ನೇಕಾರಿಕಾ ವಸತಿ ಹಾಗೂ ಕಾರ್ಯಾಗಾರ ಸ್ಥಾಪನೆಯನ್ನು ತೀವ್ರವಾಗಿ ಪರಿಶೀಲಿಸಲಾಗುವುದೆ ?

ಶ್ರೀ ಆರ್. ವಿ. ದೇಶಪಾಂಡೆ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಮಂತ್ರಿಗಳು).—

(ಅ) ವಸತಿ ಹಾಗೂ ಕಾರ್ಯಾಗಾರಗಳು ೧೯೬೬

ಸಾಮೂಹಿಕ ನೇಯ್ಗೆ ಕೇಂದ್ರಗಳು ೯

(ಜಿಲ್ಲಾವಾರ ಮಾಹಿತಿಯನ್ನು ಲಗತ್ತಿಸಿದೆ)

(ಆ) ಹೌದು